

■ ಲಕ್ಷ್ಮಣ ಬಾದಾಮಿ

# ಶಬ್ದವೇಧಿ ವಿದ್ಯೆ

ಶಬ್ದವೇಧಿ ವಿದ್ಯೆಯ ಬಗ್ಗೆ ನೀವೆಲ್ಲ ಕೇಳಿರುತ್ತೀರಿ. ನಾನು ಕೇಳಿದ್ದು ಪ್ರಾಥಮಿಕ ಶಾಲೆಯಲ್ಲಿ ಓದುವಾಗ ‘ಏಕಲವ್ಯ’ ನಾಟಕದಲ್ಲಿ. ಶಬ್ದವೂ ಕೇಳಿ ಬರುವ ದಿಕ್ಕನ್ನು ಬಹು ಸೂಕ್ಷ್ಮವಾಗಿ ಆಲಿಸಿ ತಿಳಿದುಕೊಂಡು ಬಾಣವನ್ನು ಬಿಟ್ಟು ಬೇಟೆಯಾಡುವುದೇ ಶಬ್ದವೇಧಿ ವಿದ್ಯೆ. ದ್ರೋಣಾಚಾರ್ಯರ ಮುಖಾಂತರ ಅರ್ಜುನನಿಗೆ ತಿಳಿದಿದ್ದ ಈ ವಿದ್ಯೆಯನ್ನು ಏಕಲವ್ಯ ಸ್ವಯಂ ಕರಗತಮಾಡಿಕೊಂಡಿದ್ದರಿಂದ ಅರ್ಜುನ ಅಸೂಯೆ ಪಟ್ಟುಕೊಳ್ಳುತ್ತಾನೆ. ಇದು ದ್ವಾಪರದ ಕಥೆ. ಈ ಕಲಿಕಾಲದಲ್ಲಿ ನಾವೂ ಕೂಡಾ ಶಬ್ದವೇಧಿ ವಿದ್ಯೆಯನ್ನು ಕರಗತ ಮಾಡಿಕೊಳ್ಳಲೇಬೇಕು. ಈ ವಿದ್ಯೆಯನ್ನು ಕಲಿತದ್ದೇ ಆದರೆ ನಾವು ನಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳಬಹುದು. ಇಲ್ಲದೆ ಹೋದರೆ ಮುಂದಾಗುವ ನಮ್ಮ ಪ್ರಾಣಹಾನಿಗೆ ನಾವೇ ಕಾರಣರಾಗುತ್ತೇವೆ.

ಡೆಂಗ್ಯೂ, ಮಲೇರಿಯಾ ಮತ್ತು ಚಿಕನ್ ಗುನ್ಯ ಈ ಕಾಯಿಲೆಗಳು ಮನುಷ್ಯನ ಜೀವವನ್ನು ಹಿಂಡಿ ಹಾಕುತ್ತವೆ. ಅದರಲ್ಲಿಯೂ ಈ ಡೆಂಗ್ಯೂ ಅತ್ಯಂತ ಅಪಾಯಕಾರಿ. ಸ್ವಲ್ಪ ಅಸಡ್ಡೆ ಮಾಡಿದರೆ ಪ್ರಾಣಾಂತಕವಾಗುತ್ತದೆ. ಹಾಗಾದರೆ ಈ ಎಲ್ಲ ರೋಗಗಳ ಮೂಲ ಯಾವುದು? ಸೊಳ್ಳೆಯಲ್ಲವೆ..! ‘ಅದೇನು ಮಹಾ ಯಃಕಶ್ಚಿತ್ ಸೊಳ್ಳೆ’ ಎಂದು ನೀವನ್ನಬಹುದು. ಆದರೆ ಈ ಸೊಳ್ಳೆ ಕಚ್ಚುವುದರಿಂದಲೇ ಈ ರೋಗಗಳು ಹರಡುತ್ತವೆ ಎನ್ನುವುದನ್ನು ನೀವಾದರೂ ಒಪ್ಪುತ್ತೀರಿ. ಅದಕ್ಕಾಗಿಯೇ ಇವುಗಳನ್ನು ಮಟ್ಟಹಾಕಲು ನಾವು ಕೂಡಾ ಶಬ್ದವೇಧಿಯನ್ನು ಸಾಧಿಸಿಕೊಳ್ಳಬೇಕು. ಸೊಳ್ಳೆಗಳನ್ನು ನಿರ್ಮೂಲನೆ ಮಾಡಲು ಶಬ್ದವೇಧಿಯೇ ಯಾಕಾಗಬೇಕು? ಮಾರುಕಟ್ಟೆಯಲ್ಲಿ ಸಾಕಷ್ಟು ‘ಧೂಮವೇಧಿ’ಗಳಿಲ್ಲವೇ ಎಂದು ನೀವನ್ನಬಹುದು.

ಈ ಒಂದೊಂದು ಧೂಮವೇಧಿಗಳದ್ದು ಒಂದು ಕಥೆ. ಮೊದಲನೆಯದಾಗಿ ಕಾಯಿಲ್. ಸೊಳ್ಳೆಗಳನ್ನು ಸಂಪೂರ್ಣ ನಿರ್ನಾಮ ಮಾಡಲು ಪಣ ತೊಟ್ಟಂತೆ ಇದು ಚಕ್ರವ್ಯೂಹದ ಆಕಾರದಲ್ಲಿ ರಚನೆಯಾಗಿ ತನ್ನನ್ನು ಸುಟ್ಟುಕೊಳ್ಳುತ್ತ ಧೂಮತರಂಗವನ್ನು ಧೂಮದಲೆಗಳನ್ನು ಎಬ್ಬಿಸುತ್ತ ಧೂಮಲೀಲೆಯನ್ನು ಉಂಟುಮಾಡುತ್ತದೆ. ಇದರ ಧೂಮದ ಘಾಟು ಅಂತಿಂತದ್ದಲ್ಲ! ಧೂಮಪಾನಿಯರ ನೆರಳು ಕಂಡರೂ ಸಹಿಸದ ನಾನು ಈ ಹಾಳು ಸೊಳ್ಳೆಗಳಿಗೋಸ್ಕರ ಎರಡು ಮೂರು ರಾತ್ರಿ ಏಕೋಪ್ರಕಾರ ಧೂಮಪಾನ ಮಾಡಬೇಕಾಯಿತು. ಸೊಳ್ಳೆಯ ಮೂಲೋಚ್ಚಾಟನೆಗಾಗಿ ಹೇಗೋ ಸಹಿಸಿದೆ. ಕಾಯಿಲ್ ಹಚ್ಚಿದ ಒಂದನೇ ದಿನ ಏನೋ ಸ್ವಲ್ಪ ಕಡಿಮೆಯಾದಂತಾದವು. ಮರುದಿನ ರಾತ್ರಿ ಅದೇ ರಾಗ, ಅದೇ ಹಾಡು ‘ಜೀಂ..’, ‘ಜೋಂಯ್...’ ಅಂತ ಶುರು ಮಾಡತೊಡಗಿದವು. ನನ್ನ ವೈದ್ಯ ಮಿತ್ರರೊಬ್ಬರು ಹೇಳಿದರು: ಕಾಯಿಲ್‌ನ ಹೊಗೆಯನ್ನು ಸೇವಿಸುವುದರಿಂದ ಶ್ವಾಸಕೋಶಕ್ಕೆ ತೊಂದರೆಯಾಗುತ್ತದೆಂದು. ಅಲ್ಲಿಗೇ ಕಾಯಿಲ್‌ನ ಪ್ರಯೋಗ ಪರಿಸಮಾಪ್ತಿಯಾಯ್ತು. ಆಮೇಲೆ ನೈಸರ್ಗಿಕ ಮತ್ತು ಆಯುರ್ವೇದದ ಉತ್ಪನ್ನವೆಂದು ಜಾಹಿರಾತು ನೋಡಿ ಸೊಳ್ಳೆ ನಿವಾರಕ ಊದುಬತ್ತಿಯನ್ನ ಕೊಂಡು ತಂದೆ.



ದೇವರಿಗೆ ಎಂದೂ ಊದುಬತ್ತಿ ಹಚ್ಚಿ ಬೇಡಿಕೊಳ್ಳದ ನಾನು ಸೊಳ್ಳೆಗಾಗಿ ಈ ಊದುಬತ್ತಿ ಹಚ್ಚಿ ‘ನಿರ್ನಾಮವಾಗಲಪ್ಪ ಸೊಳ್ಳೆ ಸಂತತಿ’ ಎಂದು ಬೇಡಿಕೊಂಡು ಬೆಡ್‌ರೂಮಿನ ಬಾಗಿಲು ಸಂದಿಯಲ್ಲಿ ಅದನ್ನು ಚುಚ್ಚಿ, ಹೇಗೆ ಸಾಯುತ್ತವೆ ಈ ಬೇವರ್ಸಿ ಬಡ್ಡಿಮಗನ್ನವು ನೋಡಬೇಕು... ಎಂದು ಕೂತುಹಲದಿಂದ ದಿಟ್ಟಿಸತೊಡಗಿದೆ. ತುಸು ಹೊತ್ತಿನಲ್ಲಿ ನಾಲ್ಕಾರು ಸೊಳ್ಳೆಗಳು ಊದುಬತ್ತಿಯ ಕೆಳಗೆ ಬಿದ್ದಿದ್ದವು. ನಾನು ಹುರುಪಿನಿಂದ ಸತ್ತಿದ್ದಾವೋ ಏನೋ ನೋಡೋಣವೆಂದು ಹತ್ತಿರ ಹೋಗಿ ಬೆರಳಿನಿಂದ ಮುಟ್ಟಿದೆ. ಮಿಸುಕಾಡುತ್ತ ಮೇಲೆದ್ದು ಹಾರಿಯೇ ಬಿಟ್ಟವು! ‘ಎಲಾ ಇವನ... ಹಾಳು ಸೊಳ್ಳೆಗಳೇ.,.’ ಎಂದು ಸೊಳ್ಳೆಯನ್ನೂ ಈ ಊದುಬತ್ತಿಗೆ ಸೊಳ್ಳೆ ನಾಶವಾಗುತ್ತವೆಂದು ಜಾಹೀರಾತು ಕೊಟ್ಟ ಆ ತಯಾರಕರನ್ನು ಶಪಿಸತೊಡಗಿದೆ. ಅದೇ ಹೊತ್ತಿಗೆ ‘ದೇವರಿಗೆಂದು